**ಕರ್ನಾಟಕ ವಿಧಾನ ಪರಿಷತ್ತು**

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1242

2 ಸದಸ್ಯರ ಹೆಸರು : ಶ್ರೀ ಎಸ್.ವಿ ಸಂಕನೂರು (ಪದವೀಧರರ ಕ್ಷೇತ್ರ)

3 ಉತ್ತರಿಸುವ ದಿನಾಂಕ : 23.12.2021

4 ಉತ್ತರಿಸುವ ಸಚಿವರು : ಗೃಹ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಖಾಲಿಯಿರುವ ಪಿಎಸ್ಐ ಸಿವಿಲ್ ಹುದ್ದೆಗಳು (545 ಮತ್ತು 402 ಹುದ್ದೆಗಳನ್ನು ಹೊರತುಪಡಿಸಿ) ಎಷ್ಟು; ಹಾಗೂ ಯಾವ ಕಾಲಮಿತಿಯೊಳಗೆ ಈ ಖಾಲಿಯಿರುವ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲಾಗುತ್ತದೆ;</td><td>ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಮಾರ್ಚ್-2022 ರವರೆಗೆ ರಿಕ್ತ ಹುದ್ದೆಗಳನ್ನು ಪರಿಗಣಿಸಿ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿದ್ದು, ಪ್ರಸ್ತುತ 31 ಪಿ.ಎಸ್.ಐ ಹುದ್ದೆಗಳು ಖಾಲಿ ಇರುತ್ತದೆ.<br>ಸದರಿ ರಿಕ್ತ ಹುದ್ದೆಗಳಲ್ಲಿ ಮುಂಬಡ್ತಿ ಹುದ್ದೆಗಳನ್ನು 03 ತಿಂಗಳ ಕಾಲಮಿತಿಯೊಳಗೆ (ಮಾರ್ಚ್-2022) ಭರ್ತಿ ಮಾಡಲಾಗುತ್ತದೆ. ಹಾಗೂ ಪಿ.ಎಸ್.ಐ (ಸಿವಿಲ್) (ಕ್ರೀಡೆ)-20 ಹುದ್ದೆಗಳಿಗೆ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಅವುಗಳ ನೇಮಕಾತಿ ಪ್ರಕ್ರಿಯೆಯನ್ನು 06 ತಿಂಗಳ ಕಾಲಾವಧಿಯಲ್ಲಿ ಪೂರ್ಣಗೊಳಿಸಿ ಭರ್ತಿ ಮಾಡಲಾಗುತ್ತದೆ.</td></tr>
<tr><td>ಆ</td><td>ಪ್ರಸ್ತುತ ನೇಮಕಾತಿ ಹಂತದಲ್ಲಿರುವ 545 ಪಿಎಸ್ಐ ಮತ್ತು 402 ಪಿಎಸ್ಐ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯು ಪೂರ್ಣಗೊಳ್ಳುವುದು ಯಾವಾಗ;</td><td>ಪ್ರಸ್ತುತ ನೇಮಕಾತಿ ಹಂತದಲ್ಲಿರುವ 545 ಪಿ.ಎಸ್.ಐ (ಸಿವಿಲ್) ಹುದ್ದೆಗಳ ನೇಮಕಾತಿ ಪ್ರಕ್ರಿಯೆಯು ಮಾರ್ಚ್-2022ಕ್ಕೆ ಹಾಗೂ 402 ಪಿ.ಎಸ್.ಐ (ಸಿವಿಲ್) ಹುದ್ದೆಗಳ ನೇಮಕಾತಿಯು ಏಪ್ರಿಲ್-2022ಕ್ಕೆ ಪೂರ್ಣಗೊಳ್ಳುತ್ತದೆ.</td></tr>
<tr><td>ಇ</td><td>ರಾಜ್ಯದಲ್ಲಿ ಖಾಲಿಯಿರುವ ಕಾನ್ಸ್‌ಟೇಬಲ್ ಹುದ್ದೆಗಳ ಸಂಖ್ಯೆ ಎಷ್ಟು?</td><td>ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ 9159 ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳು ಖಾಲಿ ಇರುತ್ತದೆ. ಖಾಲಿ ಇರುವ ವಿವಿಧ ವೃಂದಗಳ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ವಿವರ ಕೆಳಕಂಡಂತಿದೆ.<br><table><tr><th>ಕ್ರ ಸಂ</th><th>ಹುದ್ದೆ</th><th>ರಿಕ್ತಸ್ಥಾನ</th></tr><tr><td>01</td><td>ಪಿ.ಸಿ (ಸಿವಿಲ್)</td><td>3652</td></tr><tr><td>02</td><td>ಪಿ.ಸಿ (ಸಶಸ್ತ್ರ)</td><td>2989</td></tr><tr><td>03</td><td>ಪಿ.ಸಿ (ಕೆ.ಎಸ್.ಆರ್.ಪಿ)</td><td>2161</td></tr><tr><td>04</td><td>ಪಿ.ಸಿ (ಕೆ.ಎಸ್.ಐ.ಎಸ್.ಎಫ್)</td><td>172</td></tr><tr><td>05</td><td>ಪಿ.ಸಿ (ನಿಸ್ತಂತು)</td><td>180</td></tr><tr><td>06</td><td>ಪಿ.ಸಿ (ಎಫ್.ಪಿ.ಬಿ)</td><td>5</td></tr><tr><td colspan="2">ಒಟ್ಟು</td><td>**9159**</td></tr></table></td></tr>
</table>

ಸಂಖ್ಯೆ: ಒಇ 128 ಪಿಇಐ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು